ಪಿ. ಡಬ್ಲು 1

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ದಿನಾಂಕಃ 29-10-2021.

**ಮುಂದುವರಿದ ಪಾಟೀಸವಾಲುಃ 1,** 2 ,13 ಹಾಗೂ 15 ನೇ ಪ್ರತಿವಾದಿಗಳ ಪರ ಶ್ರೀ ಜೆ.ಡಿ.ಬಿ. ವಕೀಲರಿಂದ,

ನಾನು ಕಳೆದ 2 ವರ್ಷದಿಂದ ಕುಮಟಾದಲ್ಲಿ ಉದ್ಯೋಗ ಮಾಡುತ್ತಿದ್ದೇನೆ. ನಾನು ನಮ್ಮ ಊರಿನಿಂದ ಕೆಲಸಕ್ಕೆ ಪ್ರತಿ ದಿನ ಹೋಗಿ ಬರುವುದನ್ನು ಮಾಡುತ್ತೇನೆ. ಈ ದಾವೆಯಲ್ಲಿ ಬಹಳಷ್ಟು ಆಸ್ತಿಗಳು ಇದ್ದು ಆ ಎಲ್ಲಾ ಆಸ್ತಿಗಳ ಸರ್ವೆ ನಂಬರುಗಳನ್ನು ಹಾಗೂ ಅವುಗಳ ವಿಸ್ತೀರ್ಣವನ್ನು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಸರ್ವೆ ನಂ.680 ಮೂಲತಃ 2-12-0 ಇತ್ತು. ಸರ್ವೆ ನಂ.680 2-12-0 ಜಮೀನು ಸೋಮಯ್ಯ ಹಾಗೂ ದುರ್ಗಪ್ಪ ನವರ ಹೆಸರಿಗೆ ಜಂಟಿಯಾಗಿ ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿತ್ತು ಎಂದರೆ ಸಾಕ್ಷಿಯು ಆ ಸಮಯದಲ್ಲಿ ನಮ್ಮ ಅಜ್ಜ ತೀರಿಕೊಂಡಿದ್ದರಿಂದ ಸ್ದ್ರಿ ಆಸ್ತಿ ಸೋಮಯ್ಯ ಹಾಗೂ ದುರ್ಗಪ್ಪ ನವರ ಹೆಸರಿಗೆ ಒಟ್ಟು ಕುಟುಂಬದ ನಾತೆಯಿಂದ ಭೂ ನ್ಯಾಯಾ ಮಂಡಳಿಯಿಂದ ಮಂಜೂರಾಗಿರುತ್ತದೆ ಎಂದು ಹೇಳುತ್ತಾರೆ. ಈ ದಾವೆಯನ್ನು ಸಲ್ಲಿಸುವಾಗ ಭೂ ನ್ಯಾಯ ಮಂಡಳಿಯ ಆದೇಶವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಆದೇಶದ ನಮೂದಿಸಿರುವ ವಿಷಯ ಸತ್ಯವಾಗಿರುತ್ತದೆ. ಸ್ದ್ರಿ ಭೂ ನ್ಯಾಯ ಮಂಡಳಿಯ ಆದೇಶ ಎಲ್.ಆರ್.ಎಮ್ ನಂ.11/783 ಆಗಿರುತ್ತದೆ ಎಂದರೆ ಸರಿ. ಈ ದಾವೆಯನ್ನು ಸಲ್ಲಿಸುವಾಗಿ ಸ್ದ್ರಿ ಭೂ ನ್ಯಾಯ ಮಂಡಳಿಯ ಆದೇಶದ ಪ್ರತಿಯನ್ನು ನಾನು ನಮ್ಮ ವಕೀಲರಿಗೆ ಕೊಟ್ಟಿದ್ದೆನು. ಸ್ದ್ರಿ ಆದೇಶದಂತೆ ಸೋಮಯ್ಯ ಹಾಗೂ ದುರ್ಗಪ್ಪ ನವರಿಗೆ ಪಟ್ಟ ಬಂದಿರುತ್ತದೆ ಹಾಗೂ ಆರ್.ಟಿ.ಸಿ ಅವರ ಹೆಸರಿಗೆ ಆಗಿರುತ್ತದೆ ಎಂದರೆ ನಿಜ. ಭೂ ನ್ಯಾಯ ಮಂಡಳಿಯ ಆದೇಶ ಆದ ನಂತರ ಸರ್ವೆ ನಂ.680 2-12-0 ಜಮೀನನ್ನು ಸೋಮಯ್ಯ ಹಾಗೂ ದುರ್ಗಪ್ಪ ಮಾತ್ರ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ನಿಜ. ಸಾಕ್ಷಿಯು ಮುಂದುವರಿದು ಅದು ನಮ್ಮ ಒಟ್ಟು ಕುಟುಂಬದ ಆಸ್ತಿಯಾಗಿರುತ್ತದೆ ಎಂದು ಹೇಳುತ್ತಾರೆ. ಸರ್ವೆ ನಂ.680 2-12-0 ಜಮೀನನ್ನು ನಮ್ಮ ಅಜ್ಜ ಈರ ಯಾನೆ ಬೋಳ ಗೇಣಿ ಹಕ್ಕಿನ ಮೇರೆಗೆ ಸಾಗುವಳಿ ಮಾಡುತ್ತಿದ್ದ ಎಂದು ತೋರಿಸಲು ದಾಖಲೆಗಳು ಇವೆ. ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಆ ದಾಖಲೆಗಳನ್ನು ನೋಡದೇ ಅದು ಯಾವ ದಾಖಲೆಯೆಂದು ಈಗ ನನಗೆ ಹೇಳಲು ಆಗುವುದಿಲ್ಲ. ಸರ್ವೆ ನಂ.680 2-12-0 ಜಮೀನನ್ನು

ನಮ್ಮ ಮುತ್ತಜ್ಜ ಈರ ಯಾನೆ ಬೋಳ ಯಾವತ್ತೂ ಗೇಣಿ ಹಕ್ಕಿನ ಮೇರೆಗೆ ಸಾಗುವಳಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಅಂತಹ ಯಾವುದೇ ದಾಖಲೆಗಳು ಈರ ತಂದೆ ಬೋಳನ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸೋಮಯ್ಯ ಹಾಗೂ ದುರ್ಗಪ್ಪ ಸ್ವಂತ ಗೇಣಿದಾರರಾಗಿ ಸರ್ವೆ ನಂ.680 2-12-0 ಜಮೀನನ್ನು ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಭೂ ನ್ಯಾಯಾ ಮಂಡಳಿಯಲ್ಲಿ ಪ್ರದ್ರಿ ಸರ್ವೆ ನಂಬರು ಸೋಮಯ್ಯ ಹಾಗೂ ದುರ್ಗಪ್ಪ ನವರಿಗೆ ಅವರ ಸ್ವಂತ ನಾತೆಯಿಂದ ಅವರಿಗೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಮುತ್ತಜ್ಜ ತನ್ನ ಜೀವತ ಕಾಲದಲ್ಲಿ ಗೇಣಿ ಆಸ್ತಿಗಳ ಮಂಜೂರಾತಿಗಾಗಿ ಕೋರಿ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿರುತ್ತಾರೆ. ನಮ್ಮ ಮುತ್ತಜ್ಜ ತಾನು ಗೇಣಿ ಹಕ್ಕಿನ ಮೇರೆಗೆ ಸಾಗುವಳಿ ಮಾಡುತ್ತಿದ್ದ ಎಲ್ಲಾ ಜಮೀನುಗಳು ಅವರ ಹೆಸರಿಗೆ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿಯ ಕೆಲವು ಜಮೀನುಗಳು ಅವರ ಹೆಸರಿಗೆ ಹಾಗೂ ಅವರ ಮರಣದ ನಂತರ ಅವರ ಮಕ್ಕಳಿಗೆ ಮಂಜೂರಾಗಿರುತ್ತದೆ ಎಂದು ಹೇಳುತ್ತಾರೆ. ನಿಪಿ-3 ದಿ.09-02-1977 ಈರ ಯಾನೆ ಬೋಳ ನ ಹೆಸರಿಗೆ ಭೂ ನ್ಯಾಯ ಮಂಡಳಿಯಲ್ಲಿ ಮಂಜೂರಾದ ಆದೇಶವಾಗಿರುತ್ತದೆ ಎಂದರೆ ನಿಜ. ನಿಪಿ-5 ಫಾರಂ ನಂ.7 ಹಾಗೂ ನಿಪಿ-3 ಆದೇಶದಲ್ಲಿ ಸರ್ವೆ ನಂ.680 ಇರುವುದಿಲ್ಲ ಎಂದರೆ ನಿಜ. ಸೋಮಯ್ಯ ಹಾಗೂ ದುರ್ಗಪ್ಪನವರಿಗೆ ಸರ್ವೆ ನಂ.680 ದಿ.25-11-1976 ರಲ್ಲಿ ಮಂಜೂರಾಗಿರುತ್ತದೆ ಎಂದರೆ ನಿಜ. ಸೋಮಯ್ಯ ಹಾಗೂ ದುರ್ಗಪ್ಪ ನವರಿಗೆ ಸರ್ವೆ ನಂ.680 ಮಂಜೂರಿಯಾಗುವ ಕಾಲಕ್ಕೆ ನಮ್ಮ ಮುತ್ತಜ್ಜ ಈರ ಯಾನೆ ಬೋಳ ಜೀವಂತ ಇದ್ದರು. ನಮ್ಮ ಮುತ್ತಜ್ಜ ಈರ ಯಾನೆ ಬೋಳ 1991 ರಲ್ಲಿ ತೀರಿಕೊಂಡಿರುತ್ತಾರೆ. ನಮ್ಮ ಮುತ್ತಜ್ಜ ಈರ ಯಾನೆ ಬೋಳ ಜೀವಂತ ಇರುವವರೆಗೂ ಅವರೇ ಕುಟುಂಬದ ಯಜಮಾನಿಕೆಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ನಿಜ.

ಈ ದಾವೆ ಸಲ್ಲಿಸುವಾಗ ಸರ್ವೆ ನಂ.680 ರ ಪ್ರತಿ ಗುಂಟೆಗೆ ಸುಮಾರು 1 ಲಕ್ಷ ರೂ. ಮಾರುಕಟ್ಟೆ ಬೆಲೆ ಇತ್ತು. ಈ ದಾವೆಯನ್ನು ಸಲ್ಲಿಸುವಾಗ ಸೋಮಯ್ಯ ತಂದೆ ಈರ 2 ನೇ ಪ್ರತಿವಾದಿಗೆ ಬರೆದುಕೊಟ್ಟ ದಾನ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ಸರ್ವೆ ನಂ.680 ಪೋಡಿಯಾಗಿ ಮಂಜೂರಾದ 2-12-0 ಜಮೀನು ಸರ್ವೆ ನಂ.680/2 ಆಗಿರುತ್ತದೆ ಎಂದರೆ ನಿಜ. ಪ್ರದ್ರಿ ಸರ್ವೆ ನಂಬರಿನಲ್ಲಿ ಸೋಮಯ್ಯ ತಂದೆ ಈರ 0-36-0 ಗುಂಟೆ ಜಮೀನನ್ನು ದಾನ ಮಾಡಿರುತ್ತಾನೆ ಎಂದರೆ ಸಾಕ್ಷಿಯು ಆ ದಾನ ಪತ್ರದಲ್ಲಿ ಆ ರೀತಿ ಇದೆ ಎಂದು ಹೇಳುತ್ತಾರೆ. ನಿಪಿ-1 ದಾನ ಪತ್ರ ದಿ.18-09-2010 ರಲ್ಲಿ ನೋಂದಣಿಯಾಗಿರುತ್ತದೆ ಎಂದರೆ ನಿಜ. ಪ್ರದ್ರಿ ದಾನ

ಪತ್ರಕ್ಕೆ ಸೋಮಯ್ಯನ ತಮ್ಮ ದುರ್ಗಪ್ಪನ ವಾರಸುದಾರರು ಒಪ್ಪಿಗೆ ಸೂಚಿಸಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಇಬ್ಬರು ಗಂಡು ಮಕ್ಕಳ ಪರವಾಗಿ ಅವರ ತಾಯಿ ಹಾಗೂ ಉಳಿದ ಎಲ್ಲರೂ ಸಹಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಿಪಿ-1 ರಲ್ಲಿ ಕಾಣುವ ಫೋಟೋ ಸೋಮಯ್ಯ ತಂದೆ ಈರನ ಫೊಟೋ ಆಗಿರುತ್ತದೆ ಎಂದರೆ ನಿಜ. ದಾನ ಪತ್ರದ ಆಧಾರದ ಮೇರೆಗೆ ಈಗ 2 ನೇ ಪ್ರತಿವಾದಿಗೆ ಆರ್.ಟಿ.ಸಿ ಬಂದಿರುತ್ತದೆ ಎಂದರೆ ನಿಜ. ದಾನ ಪತ್ರ ಮಾಡುವಾಗ 11-ಇ ಸ್ಕೆಚ್ಚು ಮಾಡಲಾಗಿದೆ ಎಂದರೆ ನಿಜ. ಈಗ ನಿಪಿ-1 ರಲ್ಲಿನ 0-36-0 ಜಮೀನು 2 ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ನಿಜ. 2 ನೇ ಪ್ರತಿವಾದಿಯು ಸ್ವದ್ರಿ ಆಸ್ತಿಯಲ್ಲಿ 0-6-0 ಗುಂಟೆ ಜಮೀನನ್ನು 11 ನೇ ಪ್ರತಿವಾದಿ ವಿವೇಕಾನಂದ ನಾಯಕನಿಗೆ ಮಾರಾಟ ಮಾಡಿರುತ್ತಾನೆ ಎಂದರೆ ನಿಜ. 11 ನೇ ಪ್ರತಿವಾದಿ 0-6-0 ಯಲ್ಲಿ 0-5-0 ಯನ್ನು ಬಿನ್ ಶೇತಕಿ ಮಾಡಿಕೊಂಡಿರುತ್ತಾನೆ ಎಂದರೆ ನಿಜ. ಸ್ವದ್ರಿ ಎಲ್ಲಾ ವಿಷಯನ್ನು ಈ ದಾವೆಯನ್ನು ಸಲ್ಲಿಸುವಾಗ ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ಈ ದಾವೆಯನ್ನು ಸಲ್ಲಿಸುವಾಗ ಸರ್ವೆ ನಂ.680 ಪೋಡಿಯಾಗಿ ಅದನ್ನು ಅನೇಕ ಹಿಸ್ಸೆಗಳನ್ನಾಗಿ ಮಾಡಲಾಗಿದೆ ಎಂದರೆ ನಿಜ. ಈ ದಾವೆಯನ್ನು ಸಲ್ಲಿಸುವಾಗ ಆ ಎಲ್ಲಾ ಹಿಸ್ಸೆಗಳ ದಾಖಲೆಗಳನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇವೆ. ದಿ.18-09-2010 ರಂದು ದುರ್ಗಪ್ಪ ನ ವಾರಸುದಾರರು 0-36-0 ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ನಿಜ. ಸ್ವದ್ರಿ ಕ್ರಯ ಪತ್ರಕ್ಕೆ ಸೋಮಯ್ಯ ತಂದೆ ಈರ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರಿದು 2004 ರಿಂದ ನಮ್ಮ ಅಜ್ಜ ಸೋಮಯ್ಯ ನಿಗೆ ಪಾರ್ಶ್ವವಾಯು ಆಗಿದ್ದು ಎದ್ದು ಓಡಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದು ಹೇಳುತ್ತಾರೆ. ಆಗ ನಮ್ಮ ಅಜ್ಜನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು. ನಮ್ಮ ಅಜ್ಜನಿಗೆ ಪಾರ್ಶ್ವವಾಯು ಆಗಿತ್ತು ಎಂದು ತೋರಿಸಲು ನಮ್ಮ ಬಳಿ ದಾಖಲೆ ಇಲ್ಲ. ನಮ್ಮ ಅಜ್ಜನನ್ನು ಬ್ರಹ್ಮಾವರದ ಹತ್ತಿರ ಇರುವ ಪಾರ್ಶ್ವವಾಯುಗೆ ಚಿಕಿತ್ಸೆ ಕೊಡುತ್ತಿದ್ದ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು. ನಾನು ಸ್ವದ್ರಿ ಆಸ್ಪತ್ರೆಗೆ ಹೋಗಿ ದಾಖಲೆಗಳನ್ನು ಕೇಳಿದ್ದು ಆಸ್ಪತ್ರೆಯವರು ತಾವು ಕೇವಲ ಐದು ವರ್ಷ ಮಾತ್ರ ದಾಖಲೆಗಳನ್ನು ಇಟ್ಟುಕೊಳ್ಳುತ್ತಿದ್ದು ನಂತರ ಅವುಗಳನ್ನು ನಾಶ ಮಾಡುವುದಾಗಿ ಹೇಳಿದ್ದರು. ನಮ್ಮ ಅಜ್ಜನಿಗೆ ಪಾರ್ಶ್ವವಾಯು ಆಗಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಅಜ್ಜ ತಾನು ಸಾಯುವವರೆಗೂ ಆರೋಗ್ಯವಾಗಿ ಇದ್ದನು ಹಾಗೂ ಸ್ವಸ್ಥಚಿತ್ತ ದಿಂದ ಇದ್ದನು ಎಂದರೆ ಸರಿಯಲ್ಲ.

ಸರ್ವೆ ನಂ.680 ಅಲ್ಲದೇ ದಾವಾ ಆಸ್ತಿಯ ಉಳಿದ ಸರ್ವೆ ನಂಬರುಗಳು ನಮ್ಮ ಅಜ್ಜ ಸೋಮಯ್ಯ ಬಿನ್ ಈರನ ಹೆಸರಿಗೆ ಇದ್ದವು. ಸರ್ವೆ ನಂ.680 ನ್ನು ಬಿಟ್ಟು ಉಳಿದ ಎಲ್ಲಾ

ಆಸ್ತಿಗಳನ್ನು ಸೋಮಯ್ಯ, ದುರ್ಗಪ್ಪ ಹಾಗೂ ಅವರ ಮರಣಾನಂತರ ಅವರ ವಾರಸುದಾರರು ಒಟ್ಟಾಗಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯ ಸರ್ವೆ ನಂ.680 ನ್ನು ಸಹ ಸೇರಿಸಿ ಒಟ್ಟಿಗೇ ಸಾಗುವಳಿ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ನಮ್ಮ ಅಜ್ಜ ಸೋಮಯ್ಯ ಬೆಳೆ ಸಾಲ ಮಾಡಿರಬಹುದು. ನಮ್ಮ ಅಜ್ಜ ಸಾಯುವವರೆಗೂ ಬ್ಯಾಂಕಿಗೆ ಹೋಗಿ ಬರುವುದನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸೋಮಯ್ಯ ತನ್ನ ಹೆಸರಿನಲ್ಲಿ ಇರುವ ಎಲ್ಲಾ ಆಸ್ತಿಗಳನ್ನು ಸ್ವತಃ ಸಾಗುವಳಿ ಮಾಡಿಕೊಂಡು ಬರುತ್ತಿದ್ದನು ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಬ ಮತ್ತು ಕ ದಾವಾ ಶೆಡ್ಯೂಲ್ ಆಸ್ತಿಗಳು ಮಾತ್ರ ಹಿಸ್ಸೆಯಾಗಬೇಕಾಗಿರುತ್ತದೆ ಎಂದರೆ ಸರಿಯಲ್ಲ. ಬ ಹಾಗೂ ಕ ಶೆಡ್ಯೂಲ್ ಆಸ್ತಿಗಳು ವಾದಿಗಳು ಹಾಗೂ ಪ್ರತಿವಾದಿ 3 ರಿಂದ 10 ರವರ ಜಂಟಿ ಹಕ್ಕಿನ ಆಸ್ತಿಗಳು ಆಗಿರುತ್ತದೆ ಎಂದರೆ ನಿಜ. ಸಾಕ್ಷಿಯು ಮುಂದುವರಿದು ಅ ಶೆಡ್ಯೂಲ್ ಆಸ್ತಿಯೂ ಸಹ ಜಂಟಿ ಹಕ್ಕಿನ ಆಸ್ತಿ ಆಗಿರುತ್ತದೆ ಎಂದು ಹೇಳುತ್ತಾರೆ. ಬ ಮತ್ತು ಕ ಶೆಡ್ಯೂಲ್ ಆಸ್ತಿಗಳಲ್ಲಿ ನಮ್ಮ ದೊಡ್ಡಪ್ಪ ರಾಮ ಬಿನ್ ಸೋಮಯ್ಯನಿಗೆ ಹಕ್ಕು ಇರುತ್ತದೆ ಎಂದರೆ ನಿಜ. ನಮ್ಮ ತಂದೆ ದಿ.15-03-1997 ರಲ್ಲಿ ತೀರಿಕೊಂಡಿರುತ್ತಾರೆ. ನಾವು ಮೊದಲಿನಿಂದಲೂ ದಾವಾ ಆಸ್ತಿಗಳ ಕಂದಾಯ ದಾಖಲೆಗಳನ್ನು ನೋಡಿಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ. ಈ ದಾವೆಯ ಉಳಿದ ವಾದಿಯರು ಆಗ ಮೇಜರಾಗಿದ್ದರು. ಸದ್ರಿ ವಾದಿಗಳು ದಾವಾ ಆಸ್ತಿಗಳ ಕಂದಾಯ ದಾಖಲೆಗಳನ್ನು ನೋಡಿರಬಹುದು. ದಾನ ಪತ್ರ ಆದ ವಿಷಯ ದಾನ ಪತ್ರ ಆದ ವರ್ಷವೇ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಅ ಶೆಡ್ಯೂಲ್ ಆಸ್ತಿಯ ವರ್ಣನೆ ಸರಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಅಜ್ಜ ಬರೆದುಕೊಟ್ಟ 2 ನೇ ಪ್ರತಿವಾದಿಗೆ ಬರೆದುಕೊಟ್ಟ ದಾನ ಪತ್ರ ಉಳಿದ ಎಲ್ಲರಿಗೂ ಬಂಧನಕಾರಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದ್ರಿ ದಾನ ಪತ್ರದ ಬಗ್ಗೆ ದಾನ ಆಗುವ ಸಮಯದಿಂದಲೂ ಆ ಬಗ್ಗೆ ನಮಗೆ ಗೊತ್ತಿತ್ತು ಎಂದರೆ ಸರಿಯಲ್ಲ.

**ಪಾಟೀಸವಾಲುಃ** ಪಾಟೀಸವಾಲು 3,4, ಹಾಗೂ 12 ನೇ ಪ್ರತಿವಾದಿಗಳ ಪರ ವಕೀಲರಿಂದ

3,4 ಹಾಗೂ 12 ನೇ ಪ್ರತಿವಾದಿಗಳು ಹಾಗೂ ಅವರುಗಳು ವಕೀಲರು ಗೈರು ಹಾಜರಿದ್ದು ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪಾಟೀಸವಾಲುಃ** ಪಾಟೀಸವಾಲು 11 ನೇ ಪ್ರತಿವಾದಿ ಪರ ವಕೀಲರಿಂದ
ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

**ಓ ಹೇ ಕೇ ಸರಿ ಇದೆ.**

ಸಹಿ ಇದೆ.
ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.